ಶ್ರೀ ಬಿ. ಬಸವಲಿಂಗಪ್ಪ — ತಾವು ಹೇಳಿದ್ದು ಸರಿ. ಏಕೆಂದರೆ ಒಬ್ಬ ಮನುಷ್ಯ ಕಲ್ಲು ಬಂಡೆ ವಿರುದ್ಧ ಹೋರಾಟ ಮಾಡುವುದು ಸ್ವಲ್ಪ ಕಷ್ಟವಾಗುತ್ತದೆ. ಅದನ್ನು ಒಡೆಯ ಬೇಕಾದರೆ ಅದಕ್ಕೆ ಡೈನಾಮೈಟ್ ಹಾಕಬೇಕು. ಅದನ್ನು ಮಾಡಲು ತಾವು ನಮ್ಮಂತಹವರ ಜೊತೆ ಸೇರಬೇಕು. ವಿಶೇಷ ಘಟಕ ಯೋಜನೆ ಬಗ್ಗೆ ಮಾನ್ಯ ಖಿರ್ಗಿಯವರು ಹೇಳಿದ್ದಾರೆ. ಅದರ ಬಗ್ಗೆ ಸರಕಾರ ತೀರ್ಮಾನವಾಗಿ ಯೋಜನೆ ಮಾಡುತ್ತಿದೆ. ವಿಶೇಷ ಘಟಕ ಯೋಜನೆ ಅಡಿಯಲ್ಲಿ ೧೬೮ ಕೋಟಿ ರೂಪಾಯಿಗಳನ್ನು ಬಡವರ ಬಗ್ಗೆ ಖರ್ಚು ಮಾಡಬೇಕೆಂದು ಕೇಂದ್ರ ಸರಕಾರ ನಿಗದಿ ಮಾಡಿದೆ. ಅದರಲ್ಲಿ ನಮ್ಮ ರಾಜ್ಯ ಸರ್ಕಾರದ ಹಣವೂ ಕೂಡ ಇದೆ. ಸಾಮಾನ್ಯವಾಗಿ ಅವರು ತಮ್ಮ ಆಯವ್ಯಯದಲ್ಲಿ ಏನು ಹಣವನ್ನು ನಿಗದಿಮಾಡಿದ್ದಾರೆ ಅದನ್ನು ಬಡವರಿಗೆ ಏನಾದರೂ ಉಪಯೋಗ ಆಗತಕ್ಕ ರೀತಿಯಲ್ಲಿ ಖರ್ಚು ಮಾಡಿದ್ದಾರೆಯೇ ಎಂದರೆ ಏನೂ ಇಲ್ಲ. ನಾವು ಸ್ಥಳೀಯ ಸಂಸ್ಥೆಗಳಿಗೆ ಹಣವನ್ನು ಕೊಟ್ಟಿದ್ದೇವೆ. ಯಾರು ನಿರ್ಗತಿಕ ಜನರಿದ್ದಾರೆ ಅವರಿಗೋಸ್ಕರ ಖರ್ಚು ಮಾಡಲು ನಾವು ಹಣವನ್ನು ಕೊಟ್ಟರೆ ಅವರು ಅದನ್ನು ಪೂರ್ತಿಯಾಗಿ ಖರ್ಚು ಮಾಡುವುದು ಬೇಡವೇ ? ಒಂದು ವೇಳೆ ಖರ್ಚು ಮಾಡುವಾಗಲೂ ಕೂಡ ಬೇರೆ ಯಾವುದೋ ರೀತಿಯಲ್ಲಿ ಖರ್ಚುಮಾಡುತ್ತಾರೆ. ಯಡಿಯೂರಪ್ಪನವರಂಥ ಮಹನೀಯರ ಹೊಲದಲ್ಲೋ ಅಥವಾ ಅವರ ಮನೆಯ ಪಕ್ಕದಲ್ಲೋ ಇರಿಗೇಷನ್ ವೆಲ್ ಹಾಕಿಸಿ ಕೊಂಡು ಅದನ್ನು ಫಕೀರಪ್ಪನ ಹೆಸರಿನಲ್ಲಿ ಪೋರಿಸಿರುತ್ತಾರೆ. ಇಂಥ ನಿದರ್ಶನಗಳು ನೂರಾರು ಇವೆ. ಆದ್ದರಿಂದ ನಾವು ಏನು ಮಾಡಿದ್ದೇವೆಂದರೆ ಇಂಥ ವಿಶೇಷ ಘಟಕ ಯೋಜನೆಯಲ್ಲಿ ಇರತಕ್ಕ ಹಣವನ್ನೆಲ್ಲಾ ವಿಕರೂಪದಲ್ಲಿ ಒಂದೇ ವಿಜಿನ್ಸಿಯ ಮುಖಾಂತರ ಖರ್ಚು ಮಾಡಬೇಕೆಂದು ಮಾಡುತ್ತಿದ್ದೇವೆ...

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಉಪಸಭಾಪತಿಯವರೆ, ನಿಮ್ಮಂಥವರು ಎಂಬುದು ರೆಕಾರ್ಡ್‌ಗೆ ಹೋಗಿದೆ. ನಿಮ್ಮಂಥ ಹಿರಿಯ ಸಚಿವರಿಗೆ ಇದು ಸರಿ ಎಂದು ಕೆಂಡುಬಂದರೆ ನನ್ನ ಹೆಸರನ್ನು ಹೇಳಬಹುದು...

ಶ್ರೀ ಬಿ. ಬಸವಲಿಂಗಪ್ಪ.— ನಾನು ಹೇಳಿದ್ದು ''ನಿಮ್ಮಂಥವರು'' ಅಂತ ನೀವು ಎಂದು ನಾನಂ ಹೇಳಲಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಯಡಿಯೂರಪ್ಪನನ್ನು ಬಿಟ್ಟರೆ ಬೇರೆಯವರು ಯಾರೂ ಕೂಡ ನಿಮಗೆ ಸಿಕ್ಕಲಿಲ್ಲವೇ ?

ಉಪಾಧ್ಯಕ್ಷಿಣಿಯವರು.— ಯಡಿಯೂರಪ್ಪನವರೇ ದಯವಿಟ್ಟು ಕೂತುಕೊಳ್ಳಿ. ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ. ಅವರು ಯೀಲ್ಡ್ ಆಗಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅದು ರೆಕಾರ್ಡ್‌ಗೆ ಹೋಗುತ್ತದೆ. ಮಾನ್ಯ ಬಸವಲಿಂಗಪ್ಪನವರಂಥ ಹಿರಿಯ ಸಚಿವರಿಗೆ ಸರಿ ಎಂದು ಅನಿಸಿದರೆ ಹಾಗೇ ಹೇಳಿ.

ಶ್ರೀ ಬಿ. ಬಸವಲಿಂಗಪ್ಪ.— ನಾನು ಹೇಳಿದ್ದನ್ನು ಸರಿಪಡಿಸಿಕೊಳ್ಳುತ್ತೇನೆ. ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಯಡಿಯೂರಪ್ಪನವರು ನನ್ನ ಸ್ನೇಹಿತರು. ಆ ಸಲುಗೆಯಿಂದ ನಾನು ಅವರ ಹೆಸರನ್ನು ಹೇಳಿದೆ. ದಯವಿಟ್ಟು ತಪ್ಪು ತಿಳಿದುಕೊಳ್ಳುವುದು ಬೇಡ. ನಿಮ್ಮಂಥವರು ಎಂದರೆ ಈ ಸಭಾಜದಲ್ಲಿ ಆದಿಯಿಂದಲ್ಲೂ ಬಂದಿರತಕ್ಕ ಜನರು ಯಾರಿದ್ದಾರೆ ಅಂಥವರು ಎಂಬ ಅರ್ಥದಲ್ಲಿ ನಾನು ಹೇಳಿದ್ದು. ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. ಈ ಒಂದು ವಿಶೇಷ ಘಟಕ ಯೋಜನೆಯಲ್ಲಿ ವಿಕರೂಪದಿಂದ ಒಂದೇ ವಿಜಿನ್ಸಿ ಮೂಲಕ ಹಣ ಖರ್ಚು ಮಾಡಬೇಕೆಂದು ನಮ್ಮ ಉದ್ದೇಶ. ಯಾರಿಗೋಸ್ಕರ ಈ ಹಣ ಇದೆ, ಅದು ಸಂಬಂಧಪಟ್ಟ ಫಲಾನುಭವಿಗಳಿಗೆ ನೇರವಾಗಿ ಸಿಕ್ಕಬೇಕೆಂಬುದು ನಮ್ಮ ಸರ್ಕಾರದ ತೀರ್ಮಾನ. ಈ ಅಂಶವನ್ನು ತಾವು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕೂಡ ನೋಡಬಹುದು. ಆದಷ್ಟು ಶಿಘ್ರವಾಗಿ ನಮ್ಮ ಉದ್ದೇಶವನ್ನು ಜಾರಿಯಲ್ಲಿ ತರಬೇಕೆಂದು ನಾವು ಪ್ರಯತ್ನ ಮಾಡುತ್ತಿದ್ದೇವೆಂದು ಮೇಲಿ ಈ ಕಿದ್ದುಪಡಿಗೆ ಅನುಮೋದನೆಯನ್ನು ನೀಡಬೇಕೆಂದು ಪ್ರಾರ್ಥಿಸುತ್ತೇನೆ.

ಉಪಾಧ್ಯಕ್ಷಿಣಿಯವರು.— ಈಗ ಕಿದ್ದುಪಡಿ ವಿಧೇಯಕವನ್ನು ಸಭೆಯ ಮತಕ್ಕೆ ಹಾಕುತ್ತೇನೆ...

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಉಪಾಧ್ಯಕ್ಷಿಣಿಯವರೆ, ವಿರೋಧಪಕ್ಷದ ಎಲ್ಲ ಸದಸ್ಯರೂ ನಾವು ಅರಣ್ಯ ರೋದನವನ್ನು ಮಾಡಿದ್ದೇವೆ. ಆದರೂ ಕೂಡ ಸರ್ಕಾರದವರು ನಮ್ಮ ಮಾತನ್ನು ಕೇಳುವುದಕ್ಕೆ ತಯಾರಿಲ್ಲ. ಆದ್ದರಿಂದ ಸರ್ಕಾರದ ನೀತಿಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ವಿರೋಧಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು.)